೫. ಸಹಕಾರಿ ಇಲಾಖೆಯ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ಸರ್ಕಾರಿ ನೌಕರರಂತೆ ಪರಿಗಣಿಸುವುದು.

ಶ್ರೀ ಬಿ.ಎಂ. ಇದಿನಬ್ಬ (ಭಟ್ಕಳ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಸಹಕಾರಿ ಇಲಾಖೆಯ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳನ್ನು ಸರಕಾರಿ ಸಿಬ್ಬಂದಿಗಳಂತೆ ಪರಿಗಣಿಸಬೇಕೆಂದು ಇಷ್ಟರಲ್ಲೇ ಸಹಕಾರಿ ಸಿಬ್ಬಂದಿಗಳ ಯೂನಿಯನ್‌ಗಳ ಮೂಲಕ ಚಳುವಳಿ ನಡೆಯುತ್ತದೆ. ಆದರೆ ಈವರೆಗೂ ಸಹಕಾರಿ ಸಿಬ್ಬಂದಿಗಳನ್ನು ಸರಕಾರಿ ಸಿಬ್ಬಂದಿಗಳೆಂದು ಪರಿಗಣಿಸಿಲ್ಲ. ಸರಕಾರಿ ಸಿಬ್ಬಂದಿಗಳ ಎಲ್ಲಾ ಸೌಕರ್ಯಗಳನ್ನು ಅವರಿಗೆ ನೀಡಿರುವುದಿಲ್ಲ. ಈ ಕುರಿತು ಸಹಕಾರಿ ಸಿಬ್ಬಂದಿಗಳ ವತಿಯಿಂದ ೨೩-೫-೧೯೮೮ರಂದು ವಿಧಾನಸೌಧ ಚಲೋ ಚಳುವಳಿ ಕೂಡ ನಡೆಯುತ್ತದೆ ಎಂದು ತಿಳಿದಿದೆ. ಆದಕಾರಣ ಸಹಕಾರಿ ಸಿಬ್ಬಂದಿಗಳನ್ನು ಸರಕಾರಿ ಸಿಬ್ಬಂದಿಗಳಂತೆ ಆದಷ್ಟು ಶೀಘ್ರ ಪರಿಗಣನೆಗೆ ತೆಗೆದು ಕೊಳ್ಳಲಾಗುವುದೇ ? ಈ ಕುರಿತಂತೆ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಈ ಸಹಕಾರ ಸಂಘ ಸಂಸ್ಥೆಗಳು ಸರ್ಕಾರಿ ಸಂಘ ಸಂಸ್ಥೆಗಳಲ್ಲ ಈ ಸಹಕಾರ ಸಂಘಗಳ ಸಿಬ್ಬಂದಿಗಳನ್ನು ನೇಮಕ ಮಾಡುವಾಗ ಮತ್ತು ಅವರಿಗೆ ಸೇವಾ ನಿಯಮಗಳ ಪ್ರಕಾರ ಸೌಲಭ್ಯಗಳನ್ನು ಕೊಡುವಾಗ ಆಯಾ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿ ಪರಿಶೀಲನೆ ಮಾಡಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಚಳುವಳಿ ನಡೆಯುತ್ತಿದೆ. ಈ ಚಳುವಳಿ ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆ. ಆಯಾಯ ಸಹಕಾರ ಸಂಘಗಳ ಸಿಬ್ಬಂದಿಗೆ ಸೌಲಭ್ಯಗಳನ್ನು ಕೊಡುವಾಗ ಅಂತಹ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದನ್ನು ಪರಿಶೀಲಿಸಲು ಇಚ್ಛೆಪಡುತ್ತದೆ.

ಶ್ರೀ ಆರ್. ರಾಮಯ್ಯ.—(ಆಪ್ಸೆಂಟ್)

೬. ಹೆಚ್.ಡಿ. ಕೋಟೆ ಕ್ಷೇತ್ರದಲ್ಲಿ ಜೀತಮುಕ್ತರಿಗೆ ಪರಿಹಾರ, ಸೌಲಭ್ಯ ನೀಡುವಾಗ ದುರುಪಯೋಗವಾಗಿರುವುದನ್ನು ಸರಿಪಡಿಸಲು ಮನವಿ.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಗುರ್ತಿಸಲಾಗಿರುವಂತಹ ಜೀತಮುಕ್ತರಿಗೆ ಜೀತವಿಮುಕ್ತ ಪರಿಹಾರ ಸೌಲಭ್ಯ ನೀಡುವಾಗ ಅನೇಕ ದುರುಪಯೋಗವಾಗುತ್ತಿದೆ. ಅರ್ಹವಲ್ಲದ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ನೀಡಿ ದುರುಪಯೋಗಮಾಡುತ್ತಿರುವುದಕ್ಕೆ ನನ್ನ ಕ್ಷೇತ್ರದ ಹೆಚ್.ಡಿ.ಕೋಟೆ ಆಲನಹಳ್ಳಿ ಮಂಡಲ ಪಂಚಾಯಿತಿಯಲ್ಲಿ ದುರುಪಯೋಗಪಡಿಸಿರುವುದನ್ನು ಉದಾಹರಣೆಯಾಗಿ ಕೊಡ ಬಯಸುತ್ತೇನೆ. ಆಲನಹಳ್ಳಿ ಗ್ರಾಮದ ಚಿಕ್ಕವೀರೇಗೌಡ ಮಗ ನಂಜುಂಡಸ್ವಾಮಿ, ಕೃಷ್ಣಯ್ಯನ ಹಂಡಿ ಗ್ರಾಮದ ಶ್ರೀ ಹಿರೇಗೌಡ, ಎಂಬುವರ ಮನೆಯಲ್ಲಿ ಜೀತ ಮಾಡಿಕೊಂಡಿದ್ದು, ಇವರ ಹೆಸರಲ್ಲಿ ಜೀತ ವಿಮುಕ್ತ ಪರಿಹಾರ ಪಟ್ಟಿಯಲ್ಲಿ ಸೇರ್ಪಡೆಯಾಗಿತ್ತು. ಇವರು ಕಾಲವಾದ ನಂತರ ೧೯೮೭ರಲ್ಲಿ ಜೀತ ವಿಮುಕ್ತ ಪರಿಹಾರವನ್ನು ಇವರ ಪತ್ನಿಯಾದ ಶ್ರೀಮತಿ ದೇವಿರಮ್ಮನವರಿಗೆ ಕೊಡಲಾಗಿತ್ತು.

ಆದರೆ ಇತ್ತೀಚೆಗೆ ಮಂಡಲ ಪಂಚಾಯ್ತಿಯಿಂದ ಜೀತವಿಮುಕ್ತ ಪರಿಹಾರವನ್ನು ನೀಡುವಾಗ ಜೀತವಿಮುಕ್ತನಲ್ಲದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿಯಾಗಿದ್ದಂತಹ ನಂಜುಂಡಯ್ಯನ ಮಗ ನಂಜುಂಡಸ್ವಾಮಿ ಎಂಬ ಬೇರೊಬ್ಬ ವ್ಯಕ್ತಿಗೆ ಸೌಲಭ್ಯ ನೀಡಲಾಯಿತು. ಪರಿಷ್ಕಾರ ಸೌಲಭ್ಯ ನೀಡುವುದರಲ್ಲಿ ಅನ್ಯಾಯವಾಗಿದೆ ಎಂದು ಮೈಸೂರು ಜಿಲ್ಲಾ ಪರಿಷತ್ ಸಭೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯರಾದ ಶ್ರೀ ಹೆಚ್.ಸಿ. ಶಿವಣ್ಣ ಎಂಬುವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾನು ಸಹ ಟೆಂಬಲಿಸಿ ಈ ವಿಷಯದಲ್ಲಿ ತನಿಖೆ ಆಗ್ರಹಪಡಿಸಲಾಯಿತು. ಈ ಸಂದರ್ಭದಲ್ಲಿ ಆಲನಹಳ್ಳಿ ಮಂಡಲ ಪಂಚಾಯ್ತಿ ಪ್ರಧಾನರು, ಜೀತ ವಿಮುಕ್ತರ ಸೌಲಭ್ಯದಲ್ಲಿ ಯಾವುದೇ ದುರುಪಯೋಗವಾಗಿರುವುದಿಲ್ಲವೆಂದು ಆಗಿದ್ದ ಪಕ್ಷದಲ್ಲಿ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದಲ್ಲಿ ಈ ಆರೋಪವನ್ನು ಮಾಡಿರತಕ್ಕಂತಹ ಜಿಲ್ಲಾ ಪರಿಷತ್ ಸದಸ್ಯರು ಹಾಗೂ ಶಾಸಕರು ರಾಜೀನಾಮೆ ಕೊಡಬೇಕೆಂದು ತಾಲ್ಲೂಕು ಪಂಚಾಯತಿ ಸಭೆ ಮತ್ತು ಪತ್ರಿಕೆಗಳ ಮುಖೇನ ಸವಾಲೊಡ್ಡಿದ್ದರು.

ಈ ಮೇಲ್ಕಂಡ ವಿಚಾರದಲ್ಲಿ ತನಿಖೆ ಮಾಡಿ ಜೀತ ವಿಮುಕ್ತರ ಪಟ್ಟಿಯಲ್ಲಿ ಇಲ್ಲದೇ ಇದ್ದಂತಹ ಮತ್ತು ಜೀತ ವಿಮುಕ್ತಿ ಪರಿಹಾರಕ್ಕೆ ಅರ್ಹನಲ್ಲದ ವ್ಯಕ್ತಿಯೊಬ್ಬನಿಗೆ ಪರಿಹಾರ ಕೊಟ್ಟಿರುವುದು ತಪ್ಪು ಎಂದು ಸಾಬೀತಾಗಿರುತ್ತದೆ.

ಈಗಿನ ಪಂಚಾಯ್ತಿ ರಾಜ್ಯ ವ್ಯವಸ್ಥೆಯ ಪ್ರಕಾರ ಫಲಾನುಭವಿ ಯಾರು ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಕಾರ್ಯದರ್ಶಿಯವರ ಸಮೇತ ಪ್ರಧಾನರು ಸಹ ಜವಾಬ್ದಾರಿವುಳ್ಳವರಾಗಿರುತ್ತಾರೆ.

ಆದಕಾರಣ ಉದ್ದೇಶಪೂರಿತವಾಗಿ ಆಲನಹಳ್ಳಿ ವಂಡಲ ಪಂಚಾಯಿತಿ ಪ್ರಧಾನರು ಜೀತವಿಮುಕ್ತ ಸಲ್ಲದಂತವನಿಗೆ ಸವಲತ್ತನ್ನು ಕೊಡಿಸಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿರುತ್ತಾರೆ. ಆದ್ದರಿಂದ ಪ್ರಧಾನರನ್ನು ವಜಾ ಮಾಡಲು ಈಗಾಗಲೇ ಜಿಲ್ಲಾ ಪರಿಷತ್ ಅಧ್ಯಕ್ಷರೂ ಹಾಗೂ ಕಾರ್ಯದರ್ಶಿಗಳಿಗೆ ಒತ್ತಾಯಿಸಲಾಗಿದೆ. ಆದರೆ ಏನು ಕ್ರಮ ಕೈಗೊಂಡಿಲ್ಲದಿರುವುದರಿಂದ ಈ ಕೂಡಲೇ ಪ್ರಧಾನರನ್ನು ವಜಾ ಮಾಡಲು ಕ್ರಮಕೈಗೊಳ್ಳಲಾಗುವುದೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಲ್ಲಿ ತಿಳಿಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರ ಜಿಲ್ಲಾಪರಿಷತ್ತಿನ ಕಾರ್ಯವ್ಯಾಪ್ತಿಗೆ ಬರುತ್ತದೆ. ಮಾನ್ಯ ಸದಸ್ಯರು ಸದರಿ ಜಿಲ್ಲಾಪರಿಷತ್ತಿನ ಸಕ್ರಿಯ ಸದಸ್ಯರಾಗಿರುವುದರಿಂದ ಇದರ ಬಗ್ಗೆ ಪರಿಹಾರವನ್ನು ಜಿಲ್ಲಾ ಪರಿಷತ್ತಿನ ಮುಖಾಂತರ ಪಡೆಯಬೇಕೆಂದು ಸವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

೭. ರಾಜ್ಯದಲ್ಲಿ ಹೊಸದಾಗಿ ಜಾರಿಗೆ ತಂದ ಪ್ರಾಧಿಕಾರಗಳಿಗೆ ಅಧಿಕಾರಿಗಳನ್ನು ನೇಮಿಸದೆ ಇರುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದು.

ಶ್ರೀ ಎಂ.ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೆ. ವಿಧಾನ ಸಭೆಯ ಕಳೆದ ಅಧಿವೇಶನದಲ್ಲಿ ರಾಜ್ಯದಲ್ಲಿರುವ ೫ ಪಟ್ಟಣಗಳಿಗಾಗಿ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲು ಆಶ್ವಾಸನೆ ಕೊಟ್ಟು ಪ್ರಾಧಿಕಾರ ಕಾನೂನನ್ನು ಪಾಸು ಮಾಡಲಾಯಿತು. ಅದರಂತೆ ರಾಜ್ಯಪತ್ರದಲ್ಲಿ ಆದೇಶವನ್ನೂ ಸಹ ಪ್ರಕಟಿಸಲಾಯಿತು. ಅದಾದನಂತರ ಈಗಿರುವ ನಗರಾಭಿವೃದ್ಧಿ ಮಂಡಳಿಗಳನ್ನು ಹಾಗೂ ನಗರ ಯೋಜನಾ ಪ್ರಾಧಿಕಾರಗಳನ್ನೂ ರದ್ದು ಪಡಿಸಿರುವಂತೆ ಆದೇಶ ಹೊರಡಿಸಲಾಯಿತು. ಆದರೆ ಹೊಸದಾಗಿ ರಚಿಸಿರುವ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಿಗಳಿಗೆ ಯಾವುದೇ ಸದಸ್ಯರನ್ನೂ ಅಥವಾ ಅಧ್ಯಕ್ಷರನ್ನೂ ನೇಮಿಸಿರುವುದಿಲ್ಲ. ಸದ್ಯದ ಸ್ಥಿತಿಯಲ್ಲಿ ನಗರಾಭಿವೃದ್ಧಿ ಮಂಡಳಿಗಳ ಅಧ್ಯಕ್ಷರನ್ನು ಮಾತ್ರ ವಜಾ ಮಾಡಿ ಆಯಾ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರಾಗಿ ನೇಮಿಸಲಾಗಿದೆ. ಸದಸ್ಯರು ಹಾಗೆಯೇ ಮುಂದುವರಿದಿದ್ದಾರೆ ನಗರಾಭಿವೃದ್ಧಿಯ ಕೆಲಸಗಳು ಮಾತ್ರ ತ್ರಿಶಂಕಾಸ್ವರ್ಗದ ಸ್ಥಿತಿಯಲ್ಲಿದೆ. ಪ್ರಾಧಿಕಾರಿಗಳು ಪೂರ್ಣ ರೂಪದಲ್ಲಿ ರಚನೆಯಾಗಿದೆ ಯಾವ ಕೆಲಸವೂ ನಡೆಯುತ್ತಿಲ್ಲ. ಸರಕಾರ ಈ ಕೂಡಲೇ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಕಾರ್ಯರೂಪಕ್ಕೆ ತರುವುದೇ ಎನ್ನುವ ಬಗ್ಗೆ ಈ ಸದನದಲ್ಲಿ ಉತ್ತರಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ. ೫ ನಗರ ಪಾಲಿಕೆಗಳಿಗೆ ಒಂದು ನಗರ ಪ್ರದೇಶ ಸೇರಿ ಒಟ್ಟು ೬ ಪ್ರಾಧಿಕಾರಿಗಳನ್ನು ಜಾರಿಗೆ ತರಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ೧೫–೯–೧೯೮೮ ರಂದು ಸಮಿತಿಗಳನ್ನು ರಚನೆ ಮಾಡಲಾಗಿದೆ. ಉಳಿದ ೧೫ ನಗರ ಪ್ರದೇಶಗಳಿಗೆ ಪ್ರಾಧಿಕಾರಗಳನ್ನು ಮಾಡುವ ಬಗ್ಗೆ ೧–೫–೧೯೮೮ರಂದು ಕಾನೂನನ್ನು ಜಾರಿಗೆ ತರಲಾಗಿದೆ. ಸಮಿತಿಯ ರಚನೆಯನ್ನು ಇಷ್ಟರಲ್ಲೇ ಮಾಡಲಾಗುವುದು.

೮. ರಾಜ್ಯದಲ್ಲಿರುವ ಅರೆಕಾಲಿಕ ಶಿಕ್ಷಕರಿಗೆ ಪೂರ್ಣಕಾಲಿಕ ಶಿಕ್ಷಕರ ಸೌಲಭ್ಯಗಳನ್ನು ನೀಡುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು) — ಮಾನ್ಯ ಅಧ್ಯಕ್ಷರೇ, ಬೃಹದಾಕಾರವಾಗಿ ಬೆಳೆದರೂ ಅನೇಕ ಖಾಲಿ ಸ್ಥಾನಗಳಿಗೆ ಖಾಯಂ ಭರ್ತಿ ಆಗದೆ ಕರ್ನಾಟಕ ರಾಜ್ಯದ ಸರ್ಕಾರೀ ಪ್ರೌಢಶಾಲಾ ಅರೆಕಾಲಿಕ ಶಿಕ್ಷಕರ ಬದುಕಿನ ಕಥೆ – ಇದೊಂದು ಪಂಚವಾರ್ಷಿಕ ಪರದಾಟದ ಅಸಹನೀಯ ವ್ಯಥೆ.